# ದಿವಾಣಿ ನ್ಯಾಯಾಧೀಶರು ಹಾಗೂ ಜೆ.ಎಂ.ಎಫ್.ಸಿ., ನ್ಯಾಯಾಲಯ, ನವಲಗುಂದ

ಸಿ.ಸಿ. ನಂ.518/2019

**ಫಿರ್ಯಾದಿದಾರರು** : ಕರ್ನಾಟಕ ಸರಕಾರ ಅಣ್ಣಿಗೇರಿ ಪಿ.ಎಸ್.

**ವಿರುದ್ಧ**

**ಆರೋಪಿತ** : 1. ಶ್ರೀ ಬಸಪ್ಪ ತಂದೆ ಈರಪ್ಪ ಭಾವಿಕಟ್ಟಿ
ವಯಾಃ 31 ವರ್ಷ, ಉದ್ಯೋಗಃ ಚಾಲಕ,
ಸಾಃ ಶಲವಡಿ, ತಾಃ ನವಲಗುಂದ.

**ಆಪಾದನೆ**

ಅಣ್ಣಿಗೇರಿ ಪೋಲೀಸ್ ಠಾಣೆಯ ಹದ್ದಿಯ ಪೈಕಿ ಅಣ್ಣಿಗೇರಿ ಬಸ್ ನಿಲ್ದಾಣದಲ್ಲಿ ದಿನಾಂಕಃ 09.04.2019 ರಂದು ಮುಂಜಾನೆ 10.30 ಗಂಟೆಗೆ ಆರೋಪಿಯಾದ ನೀವು ಕೆ.ಎಸ್.ಆರ್.ಟಿ.ಸಿ. ಬಸ್ ಸಂಖ್ಯೆಃ ಕೆಎ-23/ಎಫ್-764 ನೇದ್ದನ್ನು ಚಲಾಯಿಸಿಕೊಂಡು ನವಲಗುಂದ ಕಡೆಯಿಂದ ಅಣ್ಣಿಗೇರಿಗೆ ಬಂದಿದ್ದು, ಪುನಃ ನವಲಗುಂದಕ್ಕೆ ಹೋಗುವ ಸಲುವಾಗಿ ಅಣ್ಣಿಗೇರಿ ಬಸ್ ನಿಲ್ದಾಣದಲ್ಲಿ ಹಿಂದೆ ನೋಡದೆ ಅತೀ ಜೋರಿನಿಂದ ಮತ್ತು ನಿರ್ಲಕ್ಷತನದಿಂದ ನಿಮ್ಮ ಬಸ್ ನ್ನು ಹಿಂದೆ ತೆಗೆದುಕೊಳ್ಳುವಾಗ ಬಸ್ ನಿಲ್ದಾಣದಲ್ಲಿ ಬಿದ್ದಿದ್ದ ಅಕ್ಕಿಯನ್ನು ಆರಿಸುತ್ತಿದ್ದ ಶಾಂತವ್ವ ಕೋಂ. ಸುರೇಶ ಬನ್ನಿಗೋಳ ಇವಳಿಗೆ ಡಿಕ್ಕಿ ಮಾಡಿ ಬಸ್ ನ ಹಿಂದಿನ ಗಾಲಿಯು ಅವಳ ಬಲಗಾಲಿನ ಮೇಲೆ ಹಾಯ್ದು ಭಾರಿ ಗಾಯ ಪಡಿಸಿದ್ದು, ಅವಳನ್ನು ಉಪಚಾರಕ್ಕೆ ಹುಬ್ಬಳ್ಳಿ ಕಿಮ್ಸ ಆಸ್ಪತ್ರೆಗೆ ದಾಖಲು ಮಾಡಿದ್ದು ಉಪಚಾರವು ಫಲಿಸದೇ ಅದೇ ದಿನ ಸಾಯಂಕಾಲ 6.10 ಗಂಟೆಗೆ ಮರಣ ಹೊಂದುವಂತೆ ಮಾಡಿರುತ್ತೀರಿ ಆ ಮೂಲಕ ಆರೋಪಿಯಾದ ನೀವು ಭಾರತೀಯ ದಂಡ ಸಂಹಿತೆ ಕಲಂ.279 ಮತ್ತು 304 ಎ ನೇದ್ದರ ಅಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ಅಧಿಕಾರದ ವ್ಯಾಪ್ತಿಯಲ್ಲಿ ಎಸಗಿರುವುದಾಗಿ ಆರೋಪಿಸುತ್ತೇನೆ.

**ಪ್ರಶ್ನೆ.1:** ಮೇಲೆ ಓದಿ ಹೇಳಿದ ಆಪಾದನೆ ತಿಳಿಯಿತೆ ?

**ಉತ್ತರಃ**

**ಪ್ರಶ್ನೆ.2:** ಆಪಾದನೆಯನ್ನು ಒಪ್ಪಿಕೊಳ್ಳುವಿರೋ ಅಥವಾ ವಿಚಾರಣೆಯಾಗಬೇಕೋ ?

**ಉತ್ತರಃ**

(ಮೇಲಿನ ಆಪಾದನೆಯನ್ನು ಆರೋಪಿಗೆ ತಿಳಿಯುವ ಭಾಷೆಯಲ್ಲಿ ಹೇಳಿ ಅವರಿಂದ ಉತ್ತರ ಪಡೆದು ಬಹಿರಂಗ ನ್ಯಾಯಾಲಯದಲ್ಲಿ ನಮೂದು ಮಾಡಲಾಯಿತು )

ಸ್ಥಳಃ ನವಲಗುಂದ

ದಿನಾಂಕಃ 24.08.2021

**(ಸಂತೋಷ್ ಎಮ್.ಎಸ್ )**

ದಿವಾಣಿ ನ್ಯಾಯಾಧೀಶರು ಮತ್ತು ಜೆ.ಎಮ್.ಎಫ್.ಸಿ.,

ನವಲಗುಂದ.